

# ಕಪ್ಪೆಗಳ ಪಾರ್ಟಿ!

■ ಗೌರಿ

**ಆ್ಯನಿಮೇಷನ್ ತಂತ್ರಜ್ಞಾನವನ್ನು ಕಥೆ ಹೇಳುವುದಕ್ಕೆ ಎಷ್ಟು ಸೂಕ್ಷ್ಮ ಮತ್ತು ಗಾಢವಾಗಿ ಬಳಸಿಕೊಳ್ಳಬಹುದು ಎಂಬುದಕ್ಕೆ ನಿದರ್ಶನವಾಗಿ ಈ ಕಿರುಚಿತ್ರವನ್ನು ನೋಡಬಹುದು.**

ನಾವು ನಮ್ಮ ಬದುಕಿನಲ್ಲಿ, ನಮ್ಮ ಸುತ್ತಮುತ್ತಲಿನಲ್ಲಿ ನಡೆಯುವ ಪ್ರತಿಯೊಂದು ಘಟನೆ, ಚಲನೆಗಳಿಗೂ ತಾರ್ಕಿಕವಾದ ಕಾರಣವನ್ನು ಅಪೇಕ್ಷಿಸುತ್ತಿರುತ್ತೇವೆ. ‘ಅಯ್ಯೋ ನನಗೇ ಯಾಕಿಷ್ಟು ಕಷ್ಟ?’ ಎಂಬ ಆರ್ತನಾದದ ಹಿಂದೆಯೂ ಇರುವುದು ಇದೇ ಮನಃಸ್ಥಿತಿಯಲ್ಲವೇ? ಆದರೆ ವಿಚಿತ್ರವೆಂದರೆ ನಮ್ಮ ಬದುಕೂ ಹೀಗೆ ಒಂದಕ್ಕೊಂದು ಸಂಬಂಧವೇ ಇಲ್ಲದ ಘಟನೆಗಳಿಂದ ತುಂಬಿರುತ್ತದೆ. ಒಂದಕ್ಕೊಂದು ಹೊಂದಾಣಿಕೆಯೇ ಆಗದ ಘಟನೆಗಳೇ ಪರಸ್ಪರ ಒಂದಕ್ಕೊಂದು ಚೋದಿಸುತ್ತ, ಪ್ರೇರೇಪಿಸುತ್ತ ಬದುಕನ್ನು ಮುನ್ನಡೆಸುತ್ತಿರುತ್ತದೆ.

‘ಗಾರ್ಡನ್ ಪಾರ್ಟಿ’ ಎಂಬ ಆ್ಯನಿಮೇಷನ್ ಕಿರುಚಿತ್ರ, ತುಸು ಹಗುರ ಶೈಲಿಯಲ್ಲಿ ಬದುಕಿನ ವೈರುಧ್ಯವನ್ನು ಕಾಣಿಸುತ್ತದೆ. ಫ್ರಾನ್ಸ್‌ನ ಲಾಜಿಕ್ ಕಲೆಕ್ಟೀವ್ ಎಂಬ ಆ್ಯನಿಮೇಷನ್ ಸ್ಕೂಲ್‌ನ ವಿದ್ಯಾರ್ಥಿಗಳು ತಯಾರಿಸಿದ ಕಿರುಚಿತ್ರವಿದು. ಆ್ಯನಿಮೇಷನ್ ಕೆಲಸ ಸಾಕಷ್ಟು ಸೃಜನಶೀಲತೆಯನ್ನು ಬೇಡುವ ಕಲೆ. ಆದರೆ ಆ್ಯನಿಮೇಷನ್‌ನ ಜೀವಂತಿಕೆಗೇ ತಮ್ಮ ಪ್ರತಿಭೆಯನ್ನು ವಿನಿಯೋಗಿಸಿ ಕಥೆಗೆ ನಂತರದ ಸ್ಥಾನವನ್ನು ಕೊಡುವ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಅದೊಂದು ರೀತಿ ಸುಂದರವಾಗಿ ಅಲಂಕರಿಸಿದ ಆತ್ಮವಿಲ್ಲದ ಗೊಂಬೆಯ ಹಾಗೆ. ಆದರೆ ‘ಗಾರ್ಡನ್ ಪಾರ್ಟಿ’ ಕಥೆ ಮತ್ತು ಕ್ರಿಯೇಟಿವಿಟಿ ಎರಡೂ ಕಾರಣಕ್ಕೆ ಗಮನಸೆಳೆಯುತ್ತದೆ. ಹಾಗಾಗಿಯೇ ಈ ಕಿರುಚಿತ್ರ ಆಸ್ಕರ್ ಅಂಗಳಕ್ಕೂ ಲಗ್ಗೆಯಿಟ್ಟು ಬಂದಿತ್ತು.

ದೊಡ್ಡ ಮನೆಯೆದುರಿನ ಈಜುಕೊಳದಲ್ಲಿ ಒಂದು ಕಪ್ಪೆ ಜಿಗಿಯುತ್ತದೆ. ಈಜುಕೊಳದಿಂದ ಎದ್ದರೆ, ಅಲ್ಲಿ ಮತ್ತೊಂದು ಕಪ್ಪೆಯಿದೆ! ಮುಂದೆ ಹೋದ ಕಪ್ಪೆಯನ್ನು ಇನ್ನೊಂದು ಕಪ್ಪೆ ಹಿಂಬಾಲಿಸುತ್ತದೆ. ಗಿಡದಿಂದ ಗಿಡಕ್ಕೆ ಹಾರುವ

**ಹೆಸರು:** ಗಾರ್ಡನ್ ಪಾರ್ಟಿ
**ನಿರ್ದೇಶಕ:** ಥಿಯೊಫಿಲ್ ಡಫ್ರೆನ್ಸ್, ಫ್ಲೋರಿಯನ್ ಬಬಿಕಿಯಾನ್, ಗೇಬ್ರಿಯಲ್ ಗ್ರಾಫೆನೋರ್ನ್, ಲುಕಾಸ್ ನವರೋ, ವಿನ್ಸೆಂಟ್ ಬೇಯೊಕ್ಸ್, ವಿಕ್ಟೊರ್ ಕೈರೆ
**ನಿರ್ಮಾಣ:** ಜೂಲಿಯನ್ ಡೆಪಾರಿಸ್
**ಸಂಗೀತ:** ವಿರೊಮೈನ್ ಮೊಂಟಿಯನ್, ಸ್ಟೀವ್ ಸಿಡೆವೆಲ್

ಚಿಟ್ಟೆಯನ್ನು ಹಿಡಿಯುವ ಹಂಬಲದಲ್ಲಿ ಇನ್ನೊಂದು ಕಪ್ಪೆಯಿದೆ. ಮನೆಯೊಳಗೆ ಮತ್ತೊಂದು ಕಪ್ಪೆ ಊಟದ ಮೇಜಿನ ಮೇಲೆ ಕೂತಿದೆ. ಮನೆಯ ಗಾಜಿನ ಮೇಲೆ ಇನ್ನೊಂದು ಕಪ್ಪೆ ಒಂದೊಂದೆ ಹೆಜ್ಜೆಯಿಕ್ಕುತ್ತ ಜಿಗಿಯುತ್ತಿದೆ. ಹೀಗೆ ಐದು ಕಪ್ಪೆಗಳ ಕುಪ್ಪಳಿಸುವಿಕೆಯ ಮೂಲಕ ನಿಧಾನವಾಗಿ ಆ ಇಡೀ ಮನೆಯ ಪರಿಸ್ಥಿತಿ ತೆರೆದುಕೊಳ್ಳುತ್ತ ಹೋಗುತ್ತದೆ.

ಆ ಮನೆಯ ಗಾಜಿನ ಕಿಟಕಿಗಳ ಮೇಲೆ ಬುಲೆಟ್‌ಗಳು ಸೀಳಿಕೊಂಡು ಹೋದ ಗುರುತುಗಳಿವೆ. ಡೈನಿಂಗ್ ಟೇಬಲ್ ಮೇಲೆ ಅರ್ಧ ತಿಂದುಬಿಟ್ಟ ತಿನಿಸುಗಳಿವೆ. ಬೆಡ್‌ರೂಮಿನ ಬಟ್ಟೆ ಛಿದ್ರವಾಗಿದೆ. ಟೇಬಲ್‌ಮೇಲೆ ಪಿಸ್ತೂಲು ಮತ್ತು ಒಂದೆರಡು ಬಂದೂಕುಗಳಿವೆ. ಹಣದ ಖಜಾನೆಯ ಬಾಗಿಲು ತೆರೆದಿದೆ. ಹೀಗೆ ಕಪ್ಪೆಗಳ ಚಲನೆಯ ಹಿನ್ನೆಲೆಯಲ್ಲಿಯೇ ಇಡೀ ಮನೆ ದರೋಡೆಯಾಗಿರುವುದನ್ನು ತೆರೆದಿಡುತ್ತ ಹೋಗುತ್ತಾರೆ. ತೆರೆಯ ಮೇಲೆ ಒಂದು ಎಲಿಮೆಂಟ್‌ಗಳನ್ನು ತೋರಿಸುತ್ತ ಪರೋಕ್ಷವೆಂದು ಕಾಣುವ ಪರಿಕರಗಳ ಮೂಲಕವೇ ಮುಖ್ಯಕಥೆಯನ್ನು ಬಿಚ್ಚಿಡುತ್ತ ಹೋಗುವ ತಂತ್ರವಿದು.

ಚಿಟ್ಟೆಯ ಹಿಂದೆ ಕುಪ್ಪಳಿಸುತ್ತ ಹೋದ ಕಪ್ಪೆಯೊಂದು ಒಂದು ಕಂಪ್ಯೂಟರ್ ಕೀಬೋರ್ಡ್ ಮೇಲೆ ಜಿಗಿಯುತ್ತದೆ. ಅದರ ಜಿಗಿದ ಬಟನ್‌ಗಳ ಮೂಲಕ ಇಡೀ ಮನೆಗೆ ಬೆಳಕು ಮೂಡುತ್ತದೆ. ಸಂಗೀತ ಶುರುವಾಗುತ್ತದೆ. ಈಜುಕೊಳದಲ್ಲಿ ನೀರು ಧುಮ್ಮಿಕ್ಕತೊಡಗುತ್ತದೆ. ಸ್ಮಶಾನಮೌನದಲ್ಲಿ ಮುಳುಗಿದ್ದ ಇಡೀ ಮನೆ ಗಿಜಿಗುಡತೊಡಗುತ್ತದೆ. ಎಲ್ಲ ಕಪ್ಪೆಗಳು ಮತ್ತೆ ಈಜುಕೊಳದ ಬಳಿ ಬಂದು ಸೇರುತ್ತವೆ. ನೋಡನೋಡುತ್ತಿದ್ದ ಹಾಗೆಯೇ ಈಜುಕೊಳದ ಅಡಿಯಿಂದ ಅರೆಕೊಳೆತು ವಿಕಾರಗೊಂಡ ದಢೂತಿ ಹೆಣವೊಂದು ಬೊಳಕ್ಕನೇ ಮೇಲೆಬಂದು ನೀರಿನಲ್ಲಿ ತೇಲತೊಡಗುತ್ತದೆ. ಕಪ್ಪೆಗಳು ಅವುಗಳ ಪಾಡಿಗೆ ಅವು ತಮಗೆ ಇದ್ಯಾವುದು ಗೊತ್ತೇ ಇಲ್ಲ ಅನ್ನುವ ಹಾಗೆಯೇ ಇವೆ.

ಇಡೀ ಚಿತ್ರ ಗಮನಸೆಳೆಯುವುದು ಆ್ಯನಿಮೇಷನ್ ತಂತ್ರಜ್ಞಾನದಲ್ಲಿ ರೂಪುಗೊಂಡ ಕಪ್ಪೆಗಳ ಜೀವಂತಿಕೆಯಿಂದ. ಎಲ್ಲಿಯೂ ಕೃತಕ ಅನಿಸದ ಹಾಗೆ ಪ್ರತಿಯೊಂದು ಚಲನೆ, ನಡಿಗೆ, ಹಿನ್ನೆಲೆ ಎಲ್ಲವನ್ನೂ ಬಹುಸೂಕ್ಷ್ಮವಾಗಿ ರೂಪಿಸಲಾಗಿದೆ. ಕಪ್ಪೆಗಳ ಜಲಪಾದದ ಊರುವಿಕೆಯ ಸದ್ದನ್ನೂ ಅನುಭವಕ್ಕೆ ಒಪ್ಪಿಸುವ ಧ್ವನಿವಿನ್ಯಾಸವೂ ಈ ಕಿರುಚಿತ್ರದ ಶಕ್ತಿಗಳಲ್ಲೊಂದು. ಒಂದೊಂದು ದೃಶ್ಯವನ್ನೂ ಅಷ್ಟೇ ಗಟ್ಟಿಯಾಗಿ, ಜೀವಂತವಾಗಿ ಕಟ್ಟಿರುವ ಈ ಕಿರುಚಿತ್ರವನ್ನು ನೋಡುವುದೇ ಒಂದು ವಿಶಿಷ್ಟ ಅನುಭವ.

ಈ ಕಿರುಚಿತ್ರ ವೀಕ್ಷಣೆಗೆ bit.ly/3vk1dWS ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.